# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 536(634) |
| ವಿಧಾನ ಪರಿಷತ್ತು ಸದಸ್ಯರ ಹೆಸರು | : | ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 11.12.2023 |
| ಉತ್ತರಿಸುವ ಸಚಿವರು | : | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ.ಸಂ | ಪ್ರಶ್ನೆ | ಕರಡು ಉತ್ತರ |
|---|---|---|
| (ಅ) | ತಾಲ್ಲೂಕು ಮಟ್ಟದ ಆಯುರ್ವೇದ ಆಸ್ಪತ್ರೆಗಳಲ್ಲಿ ಒಳರೋಗಿಗಳ ಸೌಲಭ್ಯ ನೀಡಲಾಗುತ್ತಿದೆಯೇ; ಮತ್ತು ಕಳೆದ ಒಂದು ವರ್ಷದಲ್ಲಿ ದಾಖಲಾಗಿರುವ ಒಳರೋಗಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು, ಆಸ್ಪತ್ರೆವಾರು ಅಂಕಿ ಅಂಶಗಳ ವಿವರ ನೀಡುವುದು) | ತಾಲ್ಲೂಕು ಮಟ್ಟದ ಆಯುರ್ವೇದ ಆಸ್ಪತ್ರೆಗಳಲ್ಲಿ ಒಳರೋಗಿಗಳ ಸೌಲಭ್ಯ ನೀಡಲಾಗುತ್ತಿದೆ.<br>ತಾಲ್ಲೂಕು ಮಟ್ಟದ ಆಯುರ್ವೇದ ಆಸ್ಪತ್ರೆಗಳಲ್ಲಿ ಡಿಸೆಂಬರ್-2022 ರಿಂದ ನವೆಂಬರ್2023-ರವರೆಗೆ ದಾಖಲಾಗಿರುವ ಒಳರೋಗಿಗಳ ಜಿಲ್ಲಾವಾರು, ಆಸ್ಪತ್ರೆವಾರು ಅಂಕಿ ಅಂಶಗಳ ಮಾಹಿತಿಯನ್ನು ಅನುಬಂಧ-1ರಲ್ಲಿ ಒದಗಿಸಿದೆ. |
| (ಆ) | ತಾಲ್ಲೂಕು ಮತ್ತು ಜಿಲ್ಲಾಮಟ್ಟದ ಆಯುಷ್ ಆಸ್ಪತ್ರೆಗಳ ಒಳರೋಗಿಗಳಿಗೆ ಸರಿಯಾದ ಊಟದ ವ್ಯವಸ್ಥೆ ಇದೆಯೇ; ಇದ್ದಲ್ಲಿ ಊಟದ ಮೆನು ಏನು; | • ಜಿಲ್ಲಾ ಮಟ್ಟದ ಆಯುಷ್ ಆಸ್ಪತ್ರೆಗಳ ಒಳರೋಗಿಗಳಿಗೆ ಪಥ್ಯಾಹಾರದ (ಊಟದ) ವ್ಯವಸ್ಥೆ ಇರುತ್ತದೆ. ಬಹುತೇಕ ತಾಲ್ಲೂಕು ಆಸ್ಪತ್ರೆಗಳಲ್ಲಿ Day Care ರೂಪದಲ್ಲಿ ಚಿಕಿತ್ಸೆಯನ್ನು ನೀಡುತ್ತಿರುವುದರಿಂದ ಸದರಿ ಆಸ್ಪತ್ರೆಗಳಲ್ಲಿ ಊಟದ ವ್ಯವಸ್ಥೆ ಇರುವುದಿಲ್ಲ.<br>• ಜಿಲ್ಲಾ ಆಸ್ಪತ್ರೆಗಳಲ್ಲಿ ನೀಡುತ್ತಿರುವ ಮಾದರಿ ಪಥ್ಯಾಹಾರದ (ಊಟದ) ಮೆನು ವಿವರಗಳನ್ನು ಅನುಬಂಧ-2ರಲ್ಲಿ ಒದಗಿಸಿದೆ. |
| (ಇ) | ಆಯುಷ್ ಇಲಾಖೆಯಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ವೈದ್ಯರ ಅವಶ್ಯಕತೆ ಇದೆಯೇ; ಹಾಗಿದ್ದಲ್ಲಿ, ಯಾವ ವಿಷಯಗಳ ಸ್ನಾತಕೋತ್ತರ ಪದವೀಧರ ವೈದ್ಯರ ಅವಶ್ಯಕತೆ ಇದೆ; | • ಆಯುಷ್ ಇಲಾಖೆಯಲ್ಲಿ ಈ ಕೆಳಕಂಡ ಸ್ನಾತಕೋತ್ತರ ಪದವೀಧರ ವೈದ್ಯರ ಅವಶ್ಯಕತೆ ಇರುತ್ತದೆ :<br>• ಆಯುರ್ವೇದದಲ್ಲಿ ಶಲ್ಯತಂತ್ರ: ಶಸ್ತ್ರ ಚಿಕಿತ್ಸೆ (MS Shalya), ಶಾಲಾಕ್ಯತಂತ್ರ: ಕಿವಿ, ಮೂಗು, ಗಂಟಲು (E.N.T) (MS Shalakya), ಪಂಚಕರ್ಮ: M.D. in Panchakarma, ಆಯುರ್ವೇದೀಯ ಮೂಲಭೂತ ಚಿಕಿತ್ಸೆ (M.D. Basic Principles), ಕಾಯಚಿಕಿತ್ಸೆ: (General Medicine), ದ್ರವ್ಯಗುಣ: (Pharmacology), ಭೈಷಜ್ಯಕಲ್ಪನಾ & |

Scanned with OKEN Scanner

| | | |
|---|---|---|
| | | ರಸಶಾಸ್ತ್ರ; (Medicine Preparation) ಮುಂತಾದವುಗಳು ಹಾಗೂ ಯುನಾನಿ ಪದ್ಧತಿಯಲ್ಲಿ Moalajat, Ilmulqabalat, Ilaj-Bit-Tadbeer, Jild-O-Tanzeeniyat, Ilmul-Advia, Ilmul-Saidla ಮುಂತಾದ ಹಾಗೂ ಹೋಮಿಯೋಪತಿ ಪದ್ಧತಿಯಲ್ಲಿ Organol, Repertory, Materia Medica, Practice of Medicine, MD Pediatrics, MD Psycatric ಮುಂತಾದ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಪಡೆದ ವೈದ್ಯರ ಅವಶ್ಯಕತೆ ಇರುತ್ತದೆ. |
| (ಈ) | ಆಯುಷ್ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಸಮರ್ಪಕವಾಗಿ ಔಷಧಿಗಳು ದೊರೆಯದಿರುವ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಗುಣಮಟ್ಟದ ಔಷಧಿ ಪೂರೈಕೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಇಲಾಖೆಯು ಔಷಧ ಪೂರೈಕೆಗೆ ಮೀಸಲಿಟ್ಟಿರುವ ಹಣವೆಷ್ಟು; | • ಆಯುಷ್ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಸಮರ್ಪಕವಾಗಿ ಔಷಧಿಗಳು ದೊರೆಯದಿರುವ ಬಗ್ಗೆ ಸಾರ್ವಜನಿಕರಿಂದ ಯಾವುದೇ ದೂರುಗಳು ಬಂದಿರುವುದಿಲ್ಲ.<br>• ಗುಣಮಟ್ಟದ ಔಷಧಿ ಪೂರೈಕೆ ಮಾಡಲು ಸರ್ಕಾರ ಅನುಮೋದನೆ ನೀಡಿದ್ದ 4G ಸಂಸ್ಥೆಯಿಂದ ಹಾಗೂ KTPP ನಿಯಮಾವಳಿ ಪ್ರಕಾರ ಗುಣಮಟ್ಟದ ಔಷಧಿಗಳನ್ನು ಸಂಗ್ರಹಿಸಿಕೊಳ್ಳಲು ಕ್ರಮವಹಿಸಲಾಗುತ್ತಿದೆ.<br>• ಔಷಧ ಪೂರೈಕೆಗೆ 2023-24ನೇ ಸಾಲಿಗೆ ಇಲಾಖೆಯು ಮೀಸಲಿಟ್ಟಿರುವ ಹಣ ಒಟ್ಟು ರೂ:4488.00 ಲಕ್ಷಗಳು. |
| (ಉ) | ಆಯುಷ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಒಟ್ಟು ಸರ್ಕಾರಿ ವೈದ್ಯಾಧಿಕಾರಿಗಳ ಸಂಖ್ಯೆ ಎಷ್ಟು; ಹಾಗೂ ಅವರಲ್ಲಿ ಸ್ನಾತಕೋತ್ತರದ ಪದವಿ ಪಡೆದಿರುವ ವೈದ್ಯರುಗಳ ಸಂಖ್ಯೆ ಎಷ್ಟು? | ಆಯುಷ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಒಟ್ಟು ವೈದ್ಯಾಧಿಕಾರಿ ಹಾಗೂ ಸ್ನಾತಕೋತ್ತರ ಪದವಿ ಪಡೆದಿರುವ ವೈದ್ಯರುಗಳ ಸಂಖ್ಯೆ ಕೆಳಕಂಡಂತಿದೆ :<br>ವೈದ್ಯಾಧಿಕಾರಿಗಳು (ಆ/ಯು/ಹೋ/ಪ್ರ.ಚಿ.&ಯೋಗ) — 676<br>ಸ್ನಾತಕೋತ್ತರ ಪದವಿ ಪಡೆದಿರುವ ವೈದ್ಯರುಗಳು — 159 |

**ಸಂಖ್ಯೆ: ಆಕುಕ 178 ಪಿಟಿಡಿ 2023**

(ದಿನೇಶ್ ಗುಂಡೂರಾವ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

Scanned with OKEN Scanner